**ಓ.ಎಸ್.ನಂ.294/2015**

**ಪಿ.ಡಬ್ಲ್ಯೂ:1**

**ದಿನಾಂಕಃ 01-04-2021 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು**

**<u>ಪಾಟೀ ಸವಾಲುಃ 1 ನೇ ಪ್ರತಿವಾದಿಯ ಪರವಾಗಿ ಶ್ರೀ ಕೆ ಜಿ ಪಿ ವಕೀಲರಿಂದಃ-</u>**

ನಮ್ಮ ಕುಟುಂಬದ ಮೂಲ ಪುರುಷ ಬೋರಾನಾಯ್ಕ ಇರುತ್ತಾರೆ ಎಂದರೆ ಸರಿ .ಸದರಿ ಬೋರಾನಾಯ್ಕ ರವರಿಗೆ ತಿಮ್ಮಪ್ಪ ಒಬ್ಬನೇ ಮಗ ಎಂದರೆ ಸರಿ. ಸದರಿ ತಿಮ್ಮಪ್ಪನಿಗೆ ಗೋವಿಂದಪ್ಪ ಮತ್ತು ರಂಗಪ್ಪ ಇಬ್ಬರು ಮಕ್ಕಳು ಇರುತ್ತಾರೆ ಎಂದರೆ ಸರಿ. 1 ನೇ ಪ್ರತಿವಾದಿಯಾದ ರಂಗಪ್ಪ ನನ್ನ ತಂದೆ ಎಂದರೆ ಸರಿ . ಗೋವಿಂದಪ್ಪನಿಗೆ ತಿಮ್ಮಪ್ಪ, ಮಲ್ಲಿಕಾರ್ಜುನ ಮತ್ತು ಚಂದ್ರಪ್ಪ 3 ಜನ ಮಕ್ಕಳು ಇರುತ್ತಾರೆ ಎಂದರೆ ಸರಿ . ಚಂದ್ರಪ್ಪ ಮೃತ ಪಟ್ಟಿರುತ್ತಾರೆ ಅವರ ಹೆಂಡತಿಯೇ 4 ನೇ ಪ್ರತಿವಾದಿ ಎಂದರೆ ಸರಿ . ನಮ್ಮಜ್ಜ ತಿಮ್ಮಪ್ಪ ರವರು ಸಣ್ಣ ವಯಸ್ಸಿನಲ್ಲಿಯೇ ಅಂದರೆ ಸುಮಾರು 45 ವರ್ಷಗಳ ಹಿಂದೆ ಮೃತಪಟ್ಟಿರುತ್ತಾರೆ ಎಂದರೆ ಸರಿ . ನಮ್ಮಜ್ಜ ತಿಮ್ಮಪ್ಪ ಮೃತ ಪಟ್ಟ ನಂತರ ನಮ್ಮ ತಂದೆ ಮತ್ತು ಗೋವಿಂದಪ್ಪ ರವರು ದಾವಾ ಆಸ್ತಿಗಳನ್ನು ಉಳುಮೆ ಮಾಡುತ್ತಿದ್ದರು ಎಂದರೆ ಸರಿ . ಗೋವಿಂದಪ್ಪ ರವರು ಮೃತ ಪಟ್ಟು ಸುಮಾರು 40 ವರ್ಷಗಳಾಗಿರುತ್ತದೆ. ಗೋವಿಂದಪ್ಪ ರವರು ಮೃತ ಪಟ್ಟನಂತರ ನನ್ನ ತಂದೆಯು ನನ್ನನ್ನು ಮತ್ತು ದೊಡ್ಡಪ್ಪನ ಮಕ್ಕಳುಗಳನ್ನು ಪಾಲನೆ ಪೋಷಣೆ ಮಾಡಿರುತ್ತಾರೆ ಎಂದರೆ ಸರಿ . 4 ನೇ ಪ್ರತಿವಾದಿಯ ಗಂಡ ಚಂದ್ರಪ್ಪ ಮೃತ ಪಟ್ಟು ಸುಮಾರು 15 ವರ್ಷಗಳಾಗಿರುತ್ತದೆ.

ದಾವಾ ಆಸ್ತಿಗಳು ಒಟ್ಟು ಕುಟುಂಬದ ಆಸ್ತಿಗಳಾಗಿರುತ್ತದೆ ಮತ್ತು ಸದರಿ ಆಸ್ತಿಗಳಲ್ಲಿ ಯಾವುದೇ ರೀತಿ ವಿಭಾಗವಾಗಿರುವುದಿಲ್ಲವೆಂದರೆ ಸರಿ . ದಾವಾ ಆಸ್ತಿಗಳಲ್ಲಿ ನನ್ನ ತಂದೆ ಮತ್ತು ನಮ್ಮ ದೊಡ್ಡಪ್ಪನ ಮಕ್ಕಳ ನಡುವೆ ಯಾವುದೇ ರೀತಿಯ ವಿಭಾಗವಾಗಿರುವುದಿಲ್ಲವೆಂದರೆ ಸರಿ . ದಾವಾ ಆಸ್ತಿಗಳಲ್ಲಿ ನಮ್ಮ ದೊಡ್ಡಪ್ಪನ ಮಕ್ಕಳು ನಮ್ಮ ತಂದೆಗೆ ಯಾವುದೇ ಆಸ್ತಿಯನ್ನು ಕೊಟ್ಟಿರುವುದಿಲ್ಲವೆಂದರೆ ಸರಿ . ಇವತ್ತಿನ ವರೆಗೂ ಸಹ ದಾವಾ ಆಸ್ತಿಗಳಲ್ಲಿ ನನ್ನ ತಂದೆ ಮತ್ತು ನಮ್ಮ ದೊಡ್ಡಪ್ಪನ ಮಕ್ಕಳು ಜಂಟಿ ಸ್ವಾಧೀನಾನುಭವದಲ್ಲಿ ಇರುತ್ತಾರೆ ಎಂದರೆ ಸರಿ . ನಮ್ಮ ತಂದೆ ಮತ್ತು ನಮ್ಮ ದೊಡ್ಡಪ್ಪನ ಮಕ್ಕಳ ನಡುವೆ ವಿಭಾಗವಾಗದೇ ಇರುವುದರಿಂದ ದಾವಾ ಆಸ್ತಿಗಳಲ್ಲಿ ಹಿಸ್ಸೆಯನ್ನು ಕೇಳುವ ಹಕ್ಕು ಇರುವುದಿಲ್ಲವೆಂದರೆ ಸರಿಯಲ್ಲ.

**<u>ಪಾಟೀ ಸವಾಲುಃ 3 ನೇ ಪ್ರತಿವಾದಿಯ ಪರವಾಗಿ ಶ್ರೀ ಜಿ ಎನ್ ವಿ ವಕೀಲರಿಂದಃ-</u>**

ನಮ್ಮ ತಂದೆಯಾದ 1 ನೇ ಪ್ರತಿವಾದಿ ಮತ್ತು 3 ನೇ ಪ್ರತಿವಾದಿಯ ತಂದೆಯಾದ ಗೋವಿಂದಪ್ಪ ರವರ ದಾವಾ ಆಸ್ತಿಗಳಲ್ಲಿ ಸಮಾನವಾದ ಹಕ್ಕು ಇರುತ್ತದೆ ಎಂದರೆ ಸರಿ . ನಮ್ಮ ತಂದೆಯ ಹಿಸ್ಸೆಗೆ ಬರುವ ಆಸ್ತಿಗಳಲ್ಲಿ ಮಾತ್ರ ನನಗೆ ಹಕ್ಕು ಇರುತ್ತದೆ ಎಂದರೆ ಸರಿ. ಗೋವಿಂದಪ್ಪನಿಗೆ ಬರುವ ಆಸ್ತಿಗಳಲ್ಲಿ 3 ನೇ ಪ್ರತಿವಾದಿಗೂ ಸಹ ಹಕ್ಕು ಇರುತ್ತದೆ ಎಂದರೆ ಸರಿ . 3 ನೇ ಪ್ರತಿವಾದಿಗೆ ದಾವಾ ಆಸ್ತಿಗಳಲ್ಲಿ ಹಿಸ್ಸೆಯನ್ನು ಕೊಡಲು ನನ್ನದು ಯಾವುದೇ ತಕರಾರು ಇಲ್ಲ ಎಂದರೆ ಸರಿ . ದಾವಾ ಆಸ್ತಿಗಳು ಒಟ್ಟು ಕುಟುಂಬದ ಆಸ್ತಿಗಳಾಗಿರುತ್ತದೆ ಎಂದ ರೆ ಸರಿ .

**<u>(2 ನೇ ಪ್ರತಿವಾದಿ ಪರ ವಕೀಲರು ಗೈರುಹಾಜರಾಗಿದ್ದು, ಪಾಟೀ ಸವಾಲು ಮುಂದೂಡಲಾಯಿತು)</u>**

**(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)**

ಓ ಹೇ ಕೇ ಸ ಇ ಎ ಒ

(ಈರಪ್ಪ ಢವಳೇಶ್ವರ್)
2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಃದಃನ್ಯಾಃದಂ.,ರವರು, ಕಡೂರು.